## 45. ಲಾಕ್‌ಡೌನ್ ಸದ್ಯಕ್ಕೆ ಮುಗಿಯದು

ರಾಜ್ಯದಲ್ಲಿ ಕೋವಿಡ್–19ರ ಲಾಕ್‌ಡೌನ್ ಕೆಂಪು ವಲಯದಲ್ಲಿ ಮೇ 3ರ ಬಳಿಕವೂ ಮುಂದುವರೆಯುವ ಸಾಧ್ಯತೆ ಇದೆ. ಈ ವಲಯದ ಜನರು ಮೂರನೇ ಹಂತದ ಕಠಿಣ ಲಾಕ್‌ಡೌನ್‌ಗೆ ಸಿದ್ಧರಾಗಬೇಕಾಗಿದೆ. ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಿಡಿಯೋ ಸಂವಾದ ನಡೆಸಿ ಎಲ್ಲ ಜಿಲ್ಲಾಧಿಕಾರಿಗಳು ಲಾಕ್‌ಡೌನ್ ಅನ್ನು ಯಥಾಸ್ಥಿತಿ ಮುಂದುವರಿಸಲೇಬೇಕು. ಶಾಸಕರೂ ಕೂಡ ಲಾಕ್‌ಡೌನ್ ಮುಂದುವರಿಸಲು ಒತ್ತಡ ಹೇರುತ್ತಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಯಾವುದೇ ಕಾರಣಕ್ಕೂ ಅಂತರರಾಜ್ಯ ಗಡಿಗಳನ್ನು ತೆರೆಯಬಾರದು. ನೆರೆಯ ರಾಜ್ಯಗಳ ಪರಿಸ್ಥಿತಿ ತುಂಬಾ ಗಂಭೀರವಾಗಿದೆ ಎಂದು ಗಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕಳವಳ ವ್ಯಕ್ತಪಡಿಸಿದರು. ಕೆಂಪು ವಲಯದ ಜಿಲ್ಲೆಗಳಿಂದ ಅನ್ಯ ಜಿಲ್ಲೆಗಳಿಗೆ ಸಂಚರಿಸಲು ಜನರಿಗೆ ಅವಕಾಶ ನೀಡುವುದು ಬೇಡ. ಕೆಂಪು ವಲಯ ಹೊರತುಪಡಿಸಿ ಕಿತ್ತಳೆ ಮತ್ತು ಹಸಿರು ವಲಯದಲ್ಲಿ ನಿಯಂತ್ರಿತ ಚಟುವಟಿಕೆಗಳಿಗೆ ಅವಕಾಶ ನೀಡಬಹುದು ಎಂದು ಸಭೆಯಲ್ಲಿ ಸಲಹೆ ನೀಡಲಾಗಿತ್ತು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ನಡೆಸಿದ ವಿಡಿಯೋ ಸಂವಾದದಲ್ಲಿ ರಾಜ್ಯದಲ್ಲಿ ಏನೇನು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದರ ಸ್ಪಷ್ಟೀಕರಣ ಕೇಳಿದರು. ಈ ಸಂಬಂಧ ರಾಜ್ಯ ಸರ್ಕಾರ ವರದಿಯೊಂದನ್ನು ಕೇಂದ್ರಕ್ಕೆ ಕಳುಹಿಸಲಿದೆ. ಕೊರೊನಾ ಸಮಸ್ಯೆ ಸದ್ಯಕ್ಕೆ ಮುಗಿಯುವುದಿಲ್ಲ. ಅದರ ಜೊತೆ ಬದುಕುವ ಕಲೆಯನ್ನು ಕಲಿಯಬೇಕಾಗುತ್ತದೆ.

ಮಾಸ್ಕ್ ಧರಿಸುವುದು, ಅಂತರವನ್ನು ಕಾಯ್ದುಕೊಳ್ಳುವುದು, ಇನ್ನು ಮುಂದೆ ದೈನಂದಿನ ಬದುಕಿನ ಭಾಗವಾಗಬೇಕು ಇದಕ್ಕೆ ಪೂರಕವಾಗಿ ಸಾರ್ವಜನಿಕ ಮನಸ್ಥಿತಿಯನ್ನು ಸಿದ್ಧಪಡಿಸಬೇಕು ಎಂದು ಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸೂಕ್ಷ್ಮವಾಗಿ ಹೇಳಿದ್ದಾರೆಂದು ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

**ಹಸಿರು ವಲಯದಲ್ಲಿ ಇನ್ನಷ್ಟು ವಿನಾಯಿತಿ:–** ಕೋವಿಡ್ –19 ಬಾಧಿತವಲ್ಲದ ಒಂಭತ್ತು ಜಿಲ್ಲೆಗಳಲ್ಲಿ ಮೇ–3ರ ನಂತರ ಇನ್ನಷ್ಟು ಹೆಚ್ಚಿನ ಚಟುವಟಿಕೆಗಳಿಗೆ ಅವಕಾಶ ನೀಡುವ ಸಾಧ್ಯತೆ ಇದೆ. ಇದಕ್ಕೆ ಪೂರಕವಾಗಿ ಹಸಿರು ವಲಯದಲ್ಲಿರುವ 9 ಜಿಲ್ಲೆಗಳಲ್ಲಿ ಎಲ್ಲ ಬಗೆಯ ಕೈಗಾರಿಕಾ ಚಟುವಟಿಕೆಗಳನ್ನು ಆರಂಭಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ ಹಾಗೂ ಉದ್ಯಮಗಳಲ್ಲಿ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಹೇಳಿದೆ. ಮೇ –3ರ ನಂತರ ಕೆಲವು ಕ್ಷೇತ್ರಗಳಲ್ಲಿ ನಿಯಂತ್ರಿತ ಅನುಮತಿ ನೀಡುವ ಸಾಧ್ಯತೆ ಇದೆ. ವಾಣಿಜ್ಯ ಚಟುವಟಿಕೆಗಳು, ಸಾರಿಗೆ ಸೇವೆ, ಸರ್ಕಾರಿ ಕಛೇರಿಗಳು, ಕಾಮಗಾರಿಗಳು ಮುಂತಾದವುಗಳಿಗೆ ಅವಕಾಶ ಸಿಗುತ್ತದೆ. ಅಂತರ್ ಜಿಲ್ಲೆಗಳ ಮಧ್ಯೆ ವಾಹನಗಳ ಓಡಾಟಕ್ಕೆ ಅವಕಾಶ ಇರುವುದಿಲ್ಲ.

ಆಧಾರ:ಪ್ರಜಾವಾಣಿ, ದಿನಾಂಕ:28.04.2020.